ಹೆಂಡ ಮಾರಾಟ ನಿಷೇಧವನ್ನು ಹಿಂತೆಗೆದುಕೊಂಡಿರುವುದು.

2732 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಂಡ ಮಾರಾಟ ನಿಷೇಧವನ್ನು ಯಾವ್ಯಾವ ಜಿಲ್ಲೆಗಳಲ್ಲಿ ಹಿಂತೆಗೆದುಕೊಳ್ಳಲಾಗಿದೆ?

ಆ) ಅದಕ್ಕೆ ಕಾರಣ ಏನು?

ಇ) ಹೆಂಡ ಮಾರಾಟ ಹಿಂತೆಗೆದುಕೊಂಡ ಸ್ಥಳಗಳಲ್ಲಿ ಮಾರಾಟ ಹರಾಜು ಹಾಕಲಾಗಿದೆಯೇ?

ಈ) ಹಾಗಿದ್ದರೆ, ಅದರಿಂದ ಬಂದ ವರಮಾನ ಎಷ್ಟು?

ಉ) ಹರಾಜು ಹಾಕದೆ ಇದ್ದರೆ ಅದಕ್ಕೆ ಕಾರಣವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ತಾಲ್ಲೂಕುಗಳು ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ-ಗುಲ್ಬರ್ಗ, ಸೇಡಂ, ಚಿಂಚೋಳ್ಳಿ, ಚಿತ್ತಾಪುರ ತಾಲ್ಲೂಕುಗಳು ಮತ್ತು ರಾಯಚೂರು ಜಿಲ್ಲೆಯಲ್ಲಿ-ರಾಯಚೂರು ಮತ್ತು ದೇವದುರ್ಗ ತಾಲ್ಲೂಕುಗಳು.

ಆ) ಈ ಜಿಲ್ಲೆಗಳಲ್ಲಿ ಹೊರ ರಾಜ್ಯಗಳಿಂದ ಕಳ್ಳತನದಿಂದ ಸಾಗುತ್ತಿದ್ದ ಸೇಂದಿ ಮಾರಾಟವನ್ನು ತಡೆಗಟ್ಟುವ ಸಲುವಾಗಿ.

ಇ) ಹೆಂಡ ಮಾರಾಟ ನಿಷೇಧವನ್ನು ಹಿಂತೆಗೆದುಕೊಂಡ ಸ್ಥಳಗಳಲ್ಲಿ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಒಟ್ಟಾಗಿ ಹರಾಜು ಮಾಡಲಾಗಿದೆ.

ಈ) ರೂ. 1,56,85,700-00

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪೋಲೀಸ್ ಇಲಾಖೆಯನ್ನು ಬಲಪಡಿಸುವುದು.

2644 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯನ್ನು ಬಲ ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇಲಾಖೆಯನ್ನು ಬಲಪಡಿಸುವ ಉದ್ದೇಶವಿದ್ದರೆ 1989 ರಿಂದ 1991ರ ವರೆಗೆ ಹೊಸದಾಗಿ ಮಂಜೂರುಮಾಡಿದ ಆರಕ್ಷಕ ಮತ್ತು ಉಪ ಆರಕ್ಷಕ ಠಾಣೆಗಳೆಷ್ಟು? (ಜಿಲ್ಲಾ ಹಾಗೂ ತಾಲ್ಲೂಕು ಗ್ರಾಮದ ಹೆಸರು ತಿಳಿಸುವುದು)

ಇ) ರಾಜ್ಯದಲ್ಲಿ ಖಾಲಿ ಇರುವ ಪೋಲೀಸ್ ಆರಕ್ಷಕ ಉಪ ನಿರೀಕ್ಷಕರ ಸಂಖ್ಯೆ ಎಷ್ಟು, ಹಾಗೂ ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಸದ್ಯದಲ್ಲಿಯೇ ಸುಮಾರು 1000ಕಾನ್‌ಸ್ಟೇಬಲ್‌ಗಳನ್ನು ಭರ್ತಿ ಮಾಡಿಕೊಳ್ಳುವುದಾಗಿ ಸರ್ಕಾರ ಹೇಳಿಕೆ, ನೀಡಿರುವುದು ನಿಜವಲ್ಲವೇ?

ಉ) ನೇಮಕಾತಿಯನ್ನು ಯಾವ ಆಧಾರದ ಮೇಲೆ ಮಾಡಿಕೊಳ್ಳಲಾಗುವುದು ಹಾಗೂ ಎಂದಿನಿಂದ ಮಾಡಿಕೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಹೌದು

ಆ) 6 ಪೋಲೀಸ್ ಠಾಣೆಗಳನ್ನು ತೆರೆಯಲಾಗಿದೆ. 1989ರಲ್ಲಿ ಒಂದು 1990ರಲ್ಲಿ ಎರಡು ಮತ್ತು 1991ರಲ್ಲಿ 5-9-91ರವರೆಗೆ ಮೂರು.

1) ಶಿಡ್ಲಘಟ್ಟ, ಕೋಲಾರ ಜಿಲ್ಲೆ.

2) ಮಲ್ಲಾಪುರ ವಿಲೇಜ್, ಕಾರವರ, ಉತ್ತರಕನ್ನಡ ಜಿಲ್ಲೆ.

3) ಎಂ.ಕೆ. ದೊಡ್ಡಿ, ಚೆನ್ನಪಟ್ಟಣ ತಾ. ಬೆಂಗಳೂರು ಜಲ್ಲೆ.

4) ಪಡುಬಿದ್ರಿ, ಉಡುಪಿ ತಾಲ್ಲೂಕು, ಡಿ.ಕೆ. ಜಿಲ್ಲೆ.

5) ಮಿರ್ಯಾನ ವಿಲೇಜ್, ಚಿಂಚೋಲಿ ತಾ. ಗುಲ್ಬರ್ಗಜಿಲ್ಲೆ.

6) ಕದ್ರಾ ವಿಲೇಜ್, ಕಾರವಾರ ತಾ. ಉ.ಕ.ಜಿಲ್ಲೆ.

ಇ) ವಿವರಣೆ ಅನುಬಂಧ-ಅನಲ್ಲಿರುವಂತೆ

ಈ) ಹೌದು

ಉ) ಈ ಸಂಬಂಧದಲ್ಲಿರುವ ನಿಯಮಗಳಿಗನುಸಾರವಾಗಿ ಅತಿ ಶೀಘ್ರವಾಗಿ ನೇಮಕಾತಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

ಅನುಬಂಧ-ಅ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು ಘಟಕ	ಸಿವಿಲ್ ಪಿ.ಎಸ್.ಐ	ಪಿ.ಸಿ
1)	ತುಮಕೂರು	2	5
2)	ಕೋಲಾರ	3	7
3)	ಕೆ.ಜಿ.ಎಫ್	-	17
4)	ಮೈಸೂರು	-	2
5)	ಕೊಡಗು	-	9
6)	ಹಾಸನ	-	4
7)	ಧಾರವಾಡ	-	49
8)	ಬೀದರ್	1	1
9)	ಗುಲ್ಬರ್ಗ	-	41
10)	ರಾಯಚೂರು	-	9
11)	ಚಿತ್ರದುರ್ಗ	-	22
12)	ಉತ್ತರ ಕನ್ನಡ	1	24
13)	ಚಿಕ್ಕಮಗಳೂರು	-	1
14	ಪೋಲೀಸ್ ಕಮೀಷನರ್ ಮೈಸೂರು ನಗರ	1	-
15)	ಪೋಲೀಸ್ ಕಮೀಷನರ್ ಹುಬ್ಬಳ್ಳಿ-ಧಾರವಾಡ ನಗರ	-	17
16)	ಐ.ಜಿ.ಪಿ. ರಾಜ್ಯ ಗುಪ್ತವಾರ್ತೆ	45	3

17) ಐ.ಜಿ.ಪಿ. ಸಿ.ಐ.ಡಿ	2	3
18) ಐ.ಜಿ.ಪಿ., ಸಿ.ಆರ್.ಇ.ಸೆಲ್	3	14
19) ಡಿ.ಐ.ಜಿ.ಪಿ. ಆಹಾರ ವಿಭಾಗ	-	2
20) ಎಸ್.ಪಿ.ರೈಲು ಮಾರ್ಗಗಳು	-	4
21) ಎಸ್.ಪಿ. ಎಪ್.ಪಿ.ಬಿ.	-	3
22) ಎಸ್.ಪಿ.ಗಣಕ	2	2
23) ಪಿ.ಟಿ.ಎಸ್., ಚಿನ್ನಪಟ್ಟಣ	2	-
24) ಎ.ಪಿ.ಟಿ.ಎಸ್. ಬೆಂಗಳೂರು	1	-
25) ಪಿ.ಟಿ.ಎಸ್. ಮಾಗೋಡು	5	-
26) ಡಿ.ಐ.ಜಿ.ಪಿ. ಅರಣ್ಯ ವಿಭಾಗ,	1	2
ಒಟ್ಟು	67	241

ಮಿನಿ ವಾಟರ್ ಸಪ್ಲೈ ಯೋಜನೆ ಕುರಿತು.

2638 - ಶ್ರೀ ಕೆ.ಪೆಚ್. ಹನುಮೇಗೌಡ (ಹಾಸನ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಡಿಯುವ ನೀರಿಗೆ ತೊಂದರೆ ಇರುವ ಹಾಸನ ನಗರದ 1) ಕೆ.ಆರ್.ಪುರಂ ಬಡಾವಣೆಯ ಬೀರನಹಳ್ಳಿ 2) ಬಸೆಟ್ಟಿಕೊಪ್ಪಲು 3) ಚಿಕ್ಕನಾಳು ಮತ್ತು 4) ಕಾಳಮ್ಮನಗುಡಿ ಪ್ರದೇಶಗಳಲ್ಲಿ ಮಿನಿ ವಾಟರ್ ಸಪ್ಲೈ ಸ್ಕೀಮುಗಳನ್ನು ಕಾರ್ಯಗತ ಮಾಡಲು ಕ್ಷಾಮ ಪರಿಹಾರ ನಿಧಿಯಿಂದ 2ಲಕ್ಷ ರೂಪಾಯಿಗಳನ್ನು ಸಿಟಿ ಮುನಿಸಿಪಾಲಿಟಿಯವರಿಗೆ ಮಂಜೂರು ಮಾಡಿರುವುದು ನಿಜವೇ?

ಆ) ಈ ರೀತಿ ಮಂಜೂರು ಮಾಡಿರುವ ಪಣದಿಂದ ಮೇಲ್ಕಂಡ ನಾಲ್ಕು ಮಿನಿ ವಾಟರ್ ಸ್ಕೀಮುಗಳು ಕಾರ್ಯಗತವಾಗಿವೆಯೇ? ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು. 1) ಈಗ ಹೊಸದಾಗಿ ಕೊರೆಯಲಾದ ಬೀರನಹಳ್ಳಿ ದೊಡ್ಡಿಯ ಹತ್ತಿರ ಇರುವ ಕೊಳವೆ ಬಾವಿಗೆ ವಿದ್ಯುಚ್ಛಕ್ತಿಯ ಮುಳುಗು ಯಂತ್ರವನ್ನು ಅಳವಡಿಸಿ ನೀರಿನ ಮುಖ್ಯ ಪೈಪಿಗೆ ಕನೆಕ್ಷನ್ ಕೊಟ್ಟು ಸಾರ್ವಜನಿಕರಿಗೆ ನೀರು ಸರಬರಾಜು ಮಾಡಲಾಗುತ್ತಿದೆ.

2) ಕೆ.ಆರ್.ಪುರಂ ಬಡಾವಣೆಯ ಬಸೆಟ್ಟಿ ಕೊಪ್ಪಲಿನಲ್ಲಿ ಹೊಸದಾಗಿ ಕೊಳವೆಬಾವಿಯನ್ನು ಕೊರೆದು ಮುಳುಗು ಯಂತ್ರವನ್ನು ಅಳವಡಿಸಲಾಗಿದೆ. ವಿದ್ಯುಚ್ಛಕ್ತಿಯ ಸರಬರಾಜಿನ ಕೆಲಸ ನಡೆಯುತ್ತಿದ್ದು, ಆದಾದನಂತರ ನೀರಿನ ಮುಖ್ಯ ಪೈಪಿಗೆ ಕನೆಕ್ಷನ್ ಕೊಟ್ಟು ಸಾರ್ವಜನಿಕರಿಗೆ ನೀರಿನ ವಿತರಣೆ ಮಾಡಲಾಗುವುದು.

3) ಈಗ ಹೊಸದಾಗಿ ಚಿಕ್ಕನಾಳು ಪ್ರದೇಶದಲ್ಲಿ ಒಂದು ಕೊಳವೆ ಬಾವಿಯನ್ನು ಕೊರೆಯಲಾಗಿದೆ. ಆದರೆ ಅದರಲ್ಲಿ ನೀರಿನ ಉತ್ಪತ್ತಿ ಹೆಚ್ಚು ಇಲ್ಲದೇ ಇರುವುದರಿಂದ ಕೈ ಪಂಪನ್ನು ಹಾಕಲು ಕ್ರಮಕೈಗೊಳ್ಳಲಾಗಿದೆ.